# ಕೊರೊನಾ ಟ್ರ್ಯಾಕಿಂಗ್ ಆ್ಯಪ್
# ಆರೋಗ್ಯ ಸೇತು




ಕೊರೊನಾ ವೈರಸ್ ಸೋಂಕಿಗೆ ತುತ್ತಾಗಿ ಬಳಲುತ್ತಿರುವ ವ್ಯಕ್ತಿಗಳ ಮೇಲೆ ನಿಗಾ ಇಡುವ ಸಲುವಾಗಿ ‘ಆರೋಗ್ಯ ಸೇತು ಕೋವಿಡ್ –19’ ಮೊಬೈಲ್ ಆ್ಯಪ್ ಅನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ.

ಸೋಂಕಿತರ ನಿಗಾ ಹಾಗೂ ವೈಯಕ್ತಿಕ ಎಚ್ಚರಿಕಾ ಸಂದೇಶದ ಮೂಲಕ ಎಚ್ಚರಿಕೆ ನೀಡುವ ಈ ಆ್ಯಪ್ ಅನ್ನು, ಕೇಂದ್ರದ ಮಾಹಿತಿ ಸಚಿವಾಲಯದ ವ್ಯಾಪ್ತಿಯಲ್ಲಿ ಬರುವ ನ್ಯಾಷನಲ್ ಇನ್‌ಫಾರ್ಮಾಟಿಕ್ಸ್ ಸೆಂಟರ್ ಅಭಿವೃದ್ಧಿಪಡಿಸಿದೆ.

ಐಓಎಸ್ ಮತ್ತು ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ನಲ್ಲಿ ಈ ಆ್ಯಪ್ ಬಳಸಬಹುದಾಗಿದ್ದು, ಆ್ಯಪ್ ಡೌನ್‌ಲೋಡ್ ಮಾಡಿಕೊಂಡ ಬಳಿಕ ಬ್ಲೂಟೂತ್ ಮತ್ತು ಲೊಕೇಷನ್ ಆನ್ ಮಾಡಬೇಕು. ಅದರಲ್ಲಿ ಸೆಟ್ ಲೊಕೇಷನ್ ಎಂದಿರುವುದನ್ನು ‘ಆಲ್ವೇಯ್ಸ್’ ಎಂದು ಆಯ್ಕೆ ಮಾಡಿಕೊಳ್ಳಬೇಕು.

ನಿಮಗೆ ಗೊತ್ತಿಲ್ಲದೇ ಕೋವಿಡ್–19 ಪಾಸಿಟಿವ್ ಆದವರ ಬಳಿಯಲ್ಲಿ ನೀವು ಸುಳಿದಾಡಿದ್ದರೆ ನಿಮ್ಮನ್ನು ಎಚ್ಚರಿಸಲಾಗುವುದು. ನಿಮ್ಮನ್ನು ನೀವು ಹೇಗೆ ಐಸೋಲೇಟ್ ಆಗಿರಿಸಿಕೊಳ್ಳುವುದು ಎಂಬ ಸೂಚನೆಗಳ ಜೊತೆಗೆ, ಒಂದು ವೇಳೆ ನಿಮಗೆ ಲಕ್ಷಣಗಳೂ ಕಂಡು ಬಂದರೆ, ಅದಕ್ಕೆ ಬೇಕಾದ ಸಹಾಯಕ್ಕಾಗಿ ಏನು ಮಾಡಬೇಕು ಎನ್ನುವ ಸೂಚನೆಗಳನ್ನು ನೀಡಲಾಗುತ್ತದೆ. ಇದರಿಂದ ಸಾಮಾಜಿಕ ಅಂತರ ಕಾಪಾಡಿಕೊಂಡು ನಿಮ್ಮನ್ನು ನೀವು ರಕ್ಷಿಸಿಕೊಳ್ಳಬಹುದು.




ಬ್ಲೂಟೂತ್ ಮತ್ತು ಲೊಕೇಷನ್ ಜನರೇಟೆಡ್ ಸೋಷಿಯಲ್ ಗ್ರಾಫ್ ಮೂಲಕ ಆರೋಗ್ಯ ಸೇತು ಆ್ಯಪ್ ಕೋವಿಡ್–19 ಪಾಸಿಟಿವ್ ಹೊಂದಿರಬಹುದಾದ ವ್ಯಕ್ತಿಯೊಂದಿಗಿನ ನಿಮ್ಮ ಒಡನಾಟವನ್ನು ಟ್ರ್ಯಾಕ್ ಮಾಡುತ್ತದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬಕಲ್ಯಾಣಸಚಿವಾಲಯದ ಮೂಲಕ, ದೃಢೀಕೃತ ಕೊರೊನಾವೈರಸ್ ಪಾಸಿಟಿವ್ ಪ್ರಕರಣಗಳ ಮಾಹಿತಿ ಪಡೆದುಕೊಂಡು ಆ್ಯಪ್ ಕಾರ್ಯನಿರ್ವಹಿಸುತ್ತದೆ. ಕನ್ನಡ ಸಹಿತ 11 ಭಾಷೆಗಳಲ್ಲಿ ಈ ಆ್ಯಪ್ ಕಾರ್ಯನಿರ್ವಹಿಸುತ್ತದೆ.

### ಡೌನ್‌ಲೋಡ್ ಮಾಡುವುದು ಹೇಗೆ?

ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಆರೋಗ್ಯ ಸೇತು (Arogya Setu) ಎಂದು ನಮೂದಿಸಿದರೆ ಆ್ಯಪ್ ಲಭ್ಯವಾಗುತ್ತದೆ. ಅದನ್ನು ಇನ್‌ಸ್ಟಾಲ್ ಮಾಡಿಕೊಂಡ ನಂತರ ಬ್ಲೂಟೂತ್, ಲೊಕೇಷನ್ ಆನ್ ಮಾಡಬೇಕು. ನಂತರ ಲೊಕೇಷನ್ ಶೇರಿಂಗ್ ಅನ್ನು ಆಲ್‌ವೇಸ್ (Always) ಸೆಟ್ ಮಾಡಬೇಕು. ಇನ್‌ಸ್ಟಾಲ್ ಮಾಡಿದ ಆ್ಯಪ್ ಅನ್ನು ತೆರೆದರೆ ನಿಮ್ಮ ಮೊಬೈಲ್ ಸಂಖ್ಯೆಯನ್ನು ಕೇಳುತ್ತದೆ. ಅದನ್ನು ನಮೂದಿಸಿ ಒಕೆ ಮಾಡಿದ ಕೂಡಲೇ ಒಟಿಪಿ ರವಾನೆಯಾಗುತ್ತದೆ. ನಂತರ ಆ್ಯಪ್ ಬಳಕೆಗೆ ಸಿದ್ಧ.

# ಫೈನಲ್ ಕಟ್ ಪ್ರೊ ಎಕ್ಸ್ ಉಚಿತ!

ಲಾಕ್‌ಡೌನ್ ಬೆನ್ನಲ್ಲೇ ಮನೆ ಸೇರಿಕೊಂಡಿರುವ ಸಾರ್ವಜನಿಕರಿಗೆ ಅನುಕೂಲವಾಗಲೆಂದು ಆ್ಯಪಲ್ ಕಂಪನಿಯು ವಿಶ್ವದ ದುಬಾರಿ ವಿಡಿಯೊ ಎಡಿಟಿಂಗ್ ಸಾಫ್ಟ್‌ವೇರ್‌ಗಳಾದ ಫೈನಲ್ ಕಟ್, ಫೈನಲ್ ಕಟ್ ಪ್ರೋ ಎಕ್ಸ್ ಅನ್ನು ಉಚಿತವಾಗಿ ನೀಡಿದೆ.

ಕೊರೊನಾ ವೈರಸ್ ಹಾವಳಿಯಿಂದಾಗಿ ಜನರು ಅನಿವಾರ್ಯವಾಗಿ ಗೃಹಬಂಧನದಲ್ಲಿರಬೇಕಾಗಿದೆ. ಮನೆಯಲ್ಲೇ ಕೂತು ಕಾಲ ಕಳೆಯುವುದ್ದೇಗೆ ಎನ್ನುವವರ ಅನುಕೂಲಕ್ಕೆಂಬಂತೆ ಆ್ಯಪಲ್ ಕಂಪನಿಯು ಈ ಉಚಿತ ಸೇವೆಯನ್ನು ಜಾರಿಗೊಳಿಸಿದ್ದು, 90 ದಿನಗಳವರೆಗೆ ಇದನ್ನು ಪಡೆದುಕೊಳ್ಳಬಹುದು.

ವಿಡಿಯೊ ಎಡಿಟಿಂಗ್ ಕಾರ್ಯಕ್ಕೆ ಸಮಗ್ರವಾಗಿ ಸ್ಪಂದಿಸುವ ಇದು, ಫೈನಲ್ ಕಟ್ ವಿಡಿಯೊ ಎಡಿಟಿಂಗ್‌ನ ಬೇಸಿಕ್ ಸಾಫ್ಟ್‌ವೇರ್ ಆಗಿದೆ. ಈ ಎರಡೂ ಸಾಫ್ಟ್‌ವೇರ್‌ಗಳನ್ನು ಟ್ರಯಲ್ ಮಾಡಲು ಬಳಕೆದಾರರಿಗೆ ಉಚಿತವಾಗಿ ಅವಕಾಶ ಕಲ್ಪಿಸಿದೆ. ಟ್ರಯಲ್ ಅವಧಿಯನ್ನು ಆಸಕ್ತರು ಬಳಸಿಕೊಂಡು ವಿಡಿಯೊ ಎಡಿಟಿಂಗ್ ಅನ್ನು ಕಲಿಯಬಹುದು ಅಥವಾ ಕಲಿಸಬಹುದಾಗಿದೆ. ಫೈನಲ್ ಕಟ್ ಪ್ರೊ ಎಕ್ಸ್ ಸಾಫ್ಟ್‌ವೇರ್‌ನ ಮೊತ್ತ ₹24,900. ಆ್ಯಪಲ್ ವಿಡಿಯೊ ಎಡಿಟಿಂಗ್‌ನ ಮತ್ತೊಂದು ಸಾಫ್ಟ್‌ವೇರ್ ಆದ ಆ್ಯಪಲ್ ಲಾಜಿಕ್ ಪ್ರೊ ಎಕ್ಸ್ ಅನ್ನೂ ಸಹ 90 ದಿನಗಳ ಅವಧಿವರೆಗೆ ಉಚಿತವಾಗಿ ಬಳಸಲು ಅವಕಾಶ ಕಲ್ಪಿಸಿದೆ.



ಈ ಸಾಫ್ಟ್‌ವೇರ್‌ಗಳ ಉಚಿತ ಸೇವೆಯಿಂದ ಮನೆಯಲ್ಲಿ ಕುಳಿತುಕೊಂಡಿರುವ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವಾಗಲಿದೆ. ಕಿರು ಅವಧಿಯ ಸರ್ಟಿಫಿಕೇಟ್ ಕೋರ್ಸ್, ವಿಡಿಯೊ ಎಡಿಟಿಂಗ್ ಆಸಕ್ತರಿಗೆ ಹಾಗೂ ಕ್ರಿಯಾಶೀಲ ವ್ಯಕ್ತಿಗಳಿಗೆ ಈ ಸಾಫ್ಟ್‌ವೇರ್‌ಗಳಿಂದ ಪ್ರಯೋಜನವಾಗಲಿದೆ. ಜತೆಗೆ ಸಮಯದ ಸದುಪಯೋಗವೂ ಆಗಲಿದೆ.

■ ಶಶಿಕುಮಾರ್ ಸಿ.